ಶ್ರೀ ಜಿ. ರಾಜುಗೌಡ.—ಸ್ವಾಮಿ, ಇದು ಹನೂರಿನಲ್ಲಿರತಕ್ಕ ಕಿರಿಯಂ ಕಾಲೇಜು.

ಶ್ರೀ ಜೀವರಾಜ ಆಳ್ವ.—ಅದು ಯಾವುದೇ ಕಾಲೇಜು ಇರಲಿ, ಇದರಲ್ಲಿ ಏನಾದರೂ ತೊಂದರೆ, ತಪ್ಪುಗಳಾಗಿದ್ದರೆ ಅದನ್ನು ಸರಿಪಡಿಸುತ್ತೇವೆ ಮತ್ತು ಇದರ ವಾಸ್ತವಾಂಶವನ್ನು ತಿಳಿಯುವುದ ಕ್ಕೋಸ್ಕರ ಇದನ್ನು ತನಿಖೆ ಮಾಡಿಸಿ ಫಲಿತಾಂಶವನ್ನು ಬಿಡುಗಡೆ ಮಾಡಿಸುತ್ತೇನೆ.

2) Reg : Hardship caused to the farmers due to collection of land revenue in Yadgir taluk.

SRI MALLIKARJUNA M. KHARGE.—Mr Speaker, Sir, I call the attention of the Minister for Revenue, Planning and Irrigation to the hardship and harassment caused to the poor farmers of Yadgir Taluk, Gulbarga District due to the collection of arrears of land revenue forcibly since 1954 to-date.

SRI S. R. BOMMAI (Minister for Revenue).—Sir, I make the following statement.

A large amount of arrears of various Government dues including land revenue was outstanding since a long time as per the D. C. B. Considering the unsatisfactory position of states finances and to channel funds for the developmental works, the cabinet in its meeting held on 21-11-87 decided that the Revenue Department shall collect 100% of the current demand in addition to 50% of the arrears outstanding as on 31-7-87 by 31-3-88. This decision was taken by the cabinet after a thorough district-wise review of the functioning of the Revenue Department at Bidar, Gulbarga and Bijapur Districts by the Hon'ble Chief Minister.

To keep in line with this decision of the Cabinet, the Revenue Department had assigned targets under each of the five major categories of the Government dues which at the commencement of the revenue year 1987-88 stood outstanding as follows.

		Rs. in crores
1	Land Revenue and cesses	13-58
2	Water rate and Maintenance cess	22-78
3	Penal water rate	30-78
4	Loans	3-11
5	Other dues	16-78
	Total	87-03

The current demand during the year was expected to be of the order of about Rs. 25 crores as detailed below.

		Rs. in crores
1	Land Revenue and Cesses	8-00
2	Water rate and Mainenances	6-59
3	Penal water rate	7-79
4	Loans and Other dues	3-00

Accordingly it was anticipated that the Revenue Department should realise about Rs. 43 crores as arrears plus Rs. 25 crores as current demand by 31-3-88 and in order to realise this hugeamount all the Deputy Commissioners were directed on 4-12-87 to effect recoveries on all the assessees and realise the dues by launching a special drive to achieve the assigned targets. In the light of this policy decision of Govt. the Deputy Commissioners have taken action to realise the dues by assigning targets to Tahsildars with instructions to make all out efforts to realise dues with out fail.

During the process of the recovery Tahsildars brought to the notice of Deputy Commissioner that in respect of many villages the Kulawara Baki Patti did not tally with the D C. B. due to non availability of old records. This issue has been discussed at length in the Divisional level Conference of the Deputy Commissioners wherein it was decided that the recoveries must be made from all the assesses who have not cleared their dues. This effecting realisation of the dues became inevitable which has been done after deligently following the procedure laid down in Chapter XIV of the K.L.R. Act in effecting collections, duly undertaking the special drive as suggested by Government when concilia ion methods for realising the Government dues does not fetch the yields, resorting to drastic action like attachment of movable/immovable assets of the assessees and their destraint or sale which have the sanctity of the law are inevitable. Although the revenue machinery had been striving hard in effecting realisation of Government dues through a special drive in terms of the policy decision no instances of any violation of the prescribed rules have come to the notice of Government and the strict collection of the dues in accordance with the stipulate procedure under the rules cannot be construed as hardship and harrasment. On account of this special drive launched by the Revenue Department for realisation of all Government dues the collections in the District has registered 60% which is very much appreciable,

೧೨–೩೦ ಪಿ.ಎಂ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ ಈ ವರ್ಷದಲ್ಲಿ ಕಂದಾಯ ಇಲಾಖೆಯವರು ಸುಮಾರು ೩೬ ಕೋಟಿ ರೂಪಾಯಿಗಳನ್ನು ವಸೂಲು ಮಾಡಿದ್ದಾರೆ. ಸರ್ವೇಸಾಧರಣವಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಬರಗಾಲವಿದ್ದಾಗ ೧೮.೧೨.೧೪ ಕೋಟಿ ರೂಪಾಯಿಗಳು ವಸೂಲಾಗುತ್ತಿತ್ತು. ವಸೂಲು ಮಾಡುವುದರಲ್ಲಿ ಸ್ಪಷ್ಟವಾಗಿ ಅದರಲ್ಲಿ ಕೊಟ್ಟಿದ್ದೇವೆ. ಯಾವುದೇ ಒಬ್ಬ ರೈತನಿಗೆ ಅವಶ್ಯಕವಾದಷ್ಟಕ್ಕಿಂತ ಜಾಸ್ತಿ ಪದಾರ್ಥಗಳನ್ನು, ಕೃಷಿಗೆ ಸಹಾಯವಾಗತಕ್ಕಂಥ ವಸ್ತುಗಳನ್ನು, ಆವರಿಗೆ ವರ್ಷಕ್ಕೆ ಆಗುವಂಥ ಆಹಾರಧಾನ್ಯಗಳೇ ಇರಬಹುದು, ಅವುಗಳನ್ನು ಜಪ್ತಿ ಮಾಡಕೂಡದೆಂದು ಇರುತ್ತದೆ. ಭೂಮಿ, ಟ್ರಾಕ್ಟರು ಜಪ್ತಿ ಮಾಡತಕ್ಕಂಥದ್ದು ಶ್ರೀಮಂತರಿಂದ ವಸೂಲು ಮಾಡತಕ್ಕಂಥದ್ದು ಇರುತ್ತದೆ. ಯಾರಿಗೆ ಸಾಮರ್ಥ್ಯವಿರುತ್ತದೆ ಅಂಥವರಿಂದ ವಸೂಲು ಮಾಡಬೇಕೆಂದು ಹೇಳಿದ್ದೇವೆ. ಈ ವರ್ಷದಲ್ಲಿ ಯಾವುದೇರೀತಿಯ ಕಾನೂನು ಉಲ್ಲಂಘನೆ ಮಾಡಿದಂಥ ಸಂದರ್ಭವಿರುವುದಿಲ್ಲ. ಒತ್ತಾಯ ಮಾಡತಕ್ಕಂಥದ್ದು ಇರುತ್ತದೆ, ಏತಕ್ಕೆಂದರೆ ಒತ್ತಾಯ ಮಾಡದಿದ್ದರೆ ವಸೂಲು ಮಾಡುವುದಕ್ಕಾಗದಿವುದಿಲ್ಲ. ಟ್ಯಾಕ್ಸ್ ವಸೂಲು ಮಾಡಬೇಕಾಗುತ್ತದೆ. ಒಂದು ಸಂತೋಷದ ವಿಷಯ ಹೇಳಬೇಕೆಂದರೆ ಅವರ ಜಿಲ್ಲೆಯಲ್ಲಿ ೬೦ ಪರ್ಸೆಂಟ್‌ನಷ್ಟು ಕಂದಾಯ ವಸೂಲಾಗಿದೆ. ಹಿಂದಿಗಿಂತ ಹೆಚ್ಚಾಗಿದೆ. ರೈತರು ಕೊಟ್ಟಿದ್ದಾರೆ. ನಾವು ಅನೇಕ ಕನ್‌ಷೆಶನ್‌ಗಳನ್ನು ಕೊಟ್ಟಿದ್ದೇವೆ ಅದಕ್ಕಾಗಿ ಅವರು ಕೊಟ್ಟಿದ್ದಾರೆ. ತಾವು ಹೇಳತಕ್ಕದ್ದು ಕುಳುವಾರು ಪಟ್ಟಿ ರೆಕಾರ್ಡ್ಸ್ ಇಲ್ಲ ಎಂದು. ರೆಕಾರ್ಡ್ಸ್ ಇಲ್ಲದಿದ್ದರೆ ಅರಿಯರ್ಸ್ ವಸೂಲ್ಮಾಡುವುದಕ್ಕೆ ಆಗುವುದಿಲ್ಲ. ಹಾಗೇನಾದರೂ ಪ್ರಯತ್ನ ಮಾಡಿದರೆ ಅದು ಕಾನೂನು ಉಲ್ಲಂಘನೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮದು ೩ ಪುಟ ಹೇಳಿಕೆ ಇದೆ. ಅದರ ಕಾಪಿ ನಮಗಿನ್ನೂ ಸಿಕ್ಕಿಲ್ಲ. ಅದಿಲ್ಲದೆ ಸವಿಸ್ತಾರವಾಗಿ ನೋಡಿ ಕೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಅಧಿಕಾರಿಗಳಿಗೆ ಸರಿಯಾಗಿ ಹೇಳಬೇಕು. ಅಷ್ಟು ಜವಾಬ್ದಾರಿಯಿಂದ ಉತ್ತರಿಸುವುದಕ್ಕಾಗುವುದಿಲ್ಲವೆಂದರೆ ಇಲಾಖೆಯವರು ಏನು ಮಾಡುತ್ತಾರೆ ? ನೀವು ನಿಮ್ಮ ಇಲಾಖೆಯನ್ನು ಪುಲ್‌ಅಪ್ ಮಾಡಬೇಕು.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮಗೆ ಸಂಬಂಧಪಟ್ಟದ್ದು ಒಂದೇ ಪ್ಯಾರಾ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಲ್ಯಾಂಡ್ ರೆವಿನ್ಯೂ ಕಲೆಕ್ಷನ್ ಮಾಡುವಾಗ ನನ್ನ ಜಿಲ್ಲೆಯಲ್ಲಿ ಯಾಪ ಒಂದು ವೊತ್ತವನ್ನು ಕಲೆಕ್ಟ್ ಮಾಡಿದ್ದಾರೆ, ಹೆಚ್ಚು ಕಡಿಮೆ ಎಲ್ಲಾ ಕಡೆಗಳಲ್ಲೂ ಆಸ್ಟೇ ಮಾಡಿದ್ದಾರೆ. ತಾವು ಹೇಳುವ ಹಾಗೆ ಕ್ಯಾಬಿನೆಟ್ ಡಿಶಿಷನ್ ಆಗಿದೆ. ಕ್ಯಾಬಿನೆಟ್ ಡಿಶಿಷನ್ ಪ್ರಕಾರ ಲ್ಯಾಂಡ್ ರೆವಿನ್ಯೂ ಅರಿಯರ್ಸ್ ರೆಕವರಿ ಮಾಡಬೇಕೆಂಬ ಸ್ಪೆಶಲ್ ಡ್ರೈವ್ ತೆಗೆದುಕೊಂಡಿದ್ದೇವೆಂದು ಹೇಳಿದಿರಿ. ಸ್ಪೆಶಲ್ ಡ್ರೈವ್ ತೆಗೆದುಕೊಳ್ಳುವಾಗ ಹರಾಸ್‌ಮೆಂಟ್ ಮಾಡಿಲ್ಲ, ಕಾನೂನು ರೀತಿಯಾಗಿ ಏನು ರೆಕವರಿ ಮಾಡಬೇಕಾಗಿತ್ತು ಅದನ್ನು ಮಾಡಿದ್ದೇವೆಂದು ಹೇಳಿದ್ದಾರೆ. ಆದರೆ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತೇನೆ. ನಾನು ಸ್ವತಃ, ೧೯೫೪ರಲ್ಲಿ ಯಾರು ಖಾತೆದಾರರು ಇದ್ದರು ಅವರಿಂದ ಲ್ಯಾಂಡ್ ರೆವಿನ್ಯೂ ಬಾಕಿ ಇದೆ ಎಂದು ವಸೂಲ್ಮಾಡ್ದಾ ಮತ್ತು ಪೊನ್ನೆಯವರೆಗೆ ಎಲ್ಲಾ ರಶೀತಿಗಳನ್ನು ೨೦–೩೦ ಕಾಪಿ ಮಾಡಿ ನಿಮಗೆ ಮತ್ತು ಮುಖ್ಯ ಮಂತ್ರಿಗಳಿಗೆ ನನ್ನ ಪತ್ರದ ಜೊತೆ ಕಳುಹಿಸಿದ್ದೇನೆ. ಆದಕ್ಕೆ ಮುಖ್ಯ ಮಂತ್ರಿಗಳಿಂದ ಉತ್ತರ ಬಂದಿದೆ ಹರಾಸ್‌ಮೆಂಟ್ ಆಗದಿರುವುದನ್ನು ತಡೆಹಿಡಿಯಲು ಜಿಲ್ಲಾಧಿಕಾರಿಗಳಿಗೆ ಹೇಳಿ ಪ್ರಯತ್ನ ಮಾಡುತ್ತೇನೆಂದು ಹೇಳಿದ್ದಾರೆ. ಈ ಸಂದರ್ಭದಲ್ಲಿ ಕೆಲವು ತಹಶೀಲ್ದಾರರು ಪೊಸಿಬಲ್ ಆಗಿ ವಸೂಲ್ಮಾಡುತ್ತಿದ್ದಾರೆ ಕೆಲವು ಜನರು ರಶೀತಿಗಳನ್ನು ಕಳೆದುಕೊಂಡಿರುತ್ತಾರೆ, ಎಲ್ಲೋ ಇಟ್ಟು ಮರೆತು ಬಿಟ್ಟಿರುತ್ತಾರೆ, ರಶೀತಿ ಸಿಗುವುದಿಲ್ಲ. ರಶೀತಿ ಇಲ್ಲವೆಂದರೂ ತೆಗೆದುಕೊಂಡು ಬಾ ಅನ್ನುತ್ತಾರೆ. ನನ್ನ ಹತ್ತಿರ ಇಲ್ಲವೆಂದು ತನ್ನ ಹತ್ತಿರ ಇದ್ದ ಎಲ್ಲಾ ಕಾಗದಗಳನ್ನು ಕೊಟ್ಟು ಬಿಡುತ್ತಾನೆ. ೨–೩ ವರ್ಷದಿಂದ ಕಟ್ಟಿದ ರಶೀತಿ ಇದೆ, ಹಿಂದಿನದು ಕಟ್ಟಿಲ್ಲ ಅನ್ನುತ್ತಾರೆ. ನಮ್ಮದು ಅನೇಕ ಸಾರಿ ಬರಗಾಲಕ್ಕೆ ತುತ್ತಾದ ಜಿಲ್ಲೆ, ಯಾದ್ದರಿಂದ ನಾವು ಪದೇ ಪದೇ ಲ್ಯಾಂಡ್ ರೆವಿನ್ಯೂ ಅನ್ನು ಮಾಫಿ ಮಾಡಬೇಕೆಂದು ಮನವಿ ಮಾಡಿದ್ದೇವೆ. ನಿಮ್ಮ ಸರ್ಕಾರ ಇದ್ದಾಗ ಮತ್ತೆ ನಮ್ಮ ಸರ್ಕಾರ ಇದ್ದಾಗ ಕೆಲವು ಘೋಷಣೆಗಳನ್ನು ಮಾಡಿದರು. ಅದರ ಪ್ರಕಾರ ೧೦–೧೫ ಸಾರಿ ಲ್ಯಾಂಡ್ ರೆವಿನ್ಯೂ ಎಕ್ಸೆಮ್‌ಷನ್ ಆಗಿದೆ. ಆದರೂ ಸಹ ತಹಶೀಲ್ದಾರರು,

ರೆವಿನ್ಯೂ ಇನ್ಸ್‌ಪೆಕ್ಟರುಗಳು ವಿಲೇಜ್ ಅಕೌಂಟೆಂಟ್‌ಗಳು ಪೋರ್ಸೆಬಲ್ ಆಗಿ ವಸೂಲ್ಮಾಡಿದ್ದಾರೆ. ಅದರ ಬಗ್ಗೆ ನಾವು ಸರ್ಕಾರಕ್ಕೆ ಬರೆದುಕೊಟ್ಟಿದ್ದೇವೆ. ಬರೆದುಕೊಟ್ಟರೂ ಕೂಡ ನೀವು ತಡೆಗಟ್ಟಲಿಲ್ಲ ವೆಂದರೆ ಏನಾಗುತ್ತದೆ ? ಈ ಮಾತನ್ನು ನಾನು ಹೇಳುತ್ತಿಲ್ಲ. ಅಲ್ಲಿನ ಶಾಸಕರು ಮತ್ತು ಮಾಜಿ ಎಂ.ಪಿ.ಗಳು ಈ ವಿಚಾರವನ್ನು ರೈಸ್ ಮಾಡಬೇಕೆಂದರು. ಈ ಬಗ್ಗೆ ಪತ್ರ ಬರೆದರೂ ಕ್ರಮ ತೆಗೆದು ಕೊಂಡಿಲ್ಲವಾದ್ದರಿಂದ ಇವತ್ತಿನ ದಿವಸ ಗಮನ ಸೆಳೆಯುವ ಸೂಚನೆಯ ಮೂಲಕ ಈ ವಿಚಾರವನ್ನು ಎತ್ತಬೇಕಾಯಿತು. ಅಲ್ಲಿನ ಅಧಿಕಾರಿಗಳು ಹೇಳುತ್ತಾರೆ, ನಮಗೆ ಆದೇಶ ಬಂದಿದೆ, ಸುತ್ತೋಲೆ ಬಂದಿದೆ, ನಾವು ಅದರಂತೆ ವಸೂಲ್ಮಾಡುತ್ತೇವೆ ಎಂದು. ವಸೂಲ್ಮಾಡದಿದ್ದರೆ ಸಂಬಳವನ್ನು ಹಿಡಿಯುತ್ತಾರೆಂದು ವಿಲೇಜ್ ಅಕೌಂಟೆಂಟರು, ರೆವಿನ್ಯೂ ಇನ್ಸ್‌ಪೆಕ್ಟರುಗಳು ಹೇಳುತ್ತಾರೆ. ಏನು ಟಾರ್ಗೆಟ ಕೊಡುತ್ತಾರೆ ಅದನ್ನು ಫುಲ್‌ಫಿಲ್ ಮಾಡದಿದ್ದರೆ ಸ್ಯಾಲರಿ ಬರುವುದಿಲ್ಲ ಅನ್ನುತ್ತಾರೆ. ದಯವಿಟ್ಟು ನೀವು ಇದರಲ್ಲಿ ಇಂಟರ್‌ಫಿಯರ್ ಆಗಬೇಡಿ ಅನ್ನುತ್ತಾರೆ. ನ್ಯಾಯವಾಗಿ ಬರಬೇಕಾದು ದನ್ನು ತೆಗೆದುಕೊಳ್ಳಿ. ಆದರೆ ೧೯೫೪ ರಿಂದ ಇದ್ದದ್ದು ಅದೂ ನೈಜಾಮರ ಕಾಲದ್ದು, ಹೈದರಾಬಾದ್ ಸ್ಟೇಟಿಗೆ ಸಂಬಂಧಪಟ್ಟದ್ದನ್ನು ಈಗ ವಸೂಲ್ಮಾಡುವುದು ಅಂದರೆ ಏನರ್ಥ ? ರೀ-ಆರ್ಗನೈಸೇಷನ್ ಆಗುವುದಕ್ಕೆ ಮುಂಚಿನ ಅರಿಯರ್ಸ್ ಅನ್ನು ಕಲೆಕ್ಟ್ ಮಾಡುತ್ತಿದ್ದಾರೆ. ಯಾರು ಹೆರಾಸ್‌ಮೆಂಟ್ ಮಾಡಿದ್ದಾರೆ ಅವರು ಉದ್ದೇಶಪೂರ್ವಕವಾಗಿ ಮಾಡಿ ವಸೂಲ್ಮಾಡಿದ ಹಣವನ್ನು ಸರ್ಕಾರಕ್ಕೆ ಕಟ್ಟದೆ ಇರಬಹುದು, ಇತ್ತೀಚಿನದಷ್ಟು ಮಾತ್ರ ಕೊಟ್ಟು ಉಳಿದದ್ದನ್ನು ತಿಂದಿರಬಹುದು.

ಈಗ ಸ್ಪೆಷಲ್ ಡೆಪ್ಯುಟಿ ಕಮಿಷನರ್ಸ್ ಇಲ್ಲ. ಆದ್ದರಿಂದ ಡೆಪ್ಯುಟಿ ಕಮಿಷನರನ್ನು ಕರೆಸಿ ಯಾವ ಯಾವ ತಾಲ್ಲೂಕುಗಳಲ್ಲಿ ಈ ರೀತಿ ಕೆಂಪ್ಲೇಂಟ್ ಬಂದಿದೆ ಅಲ್ಲಿ ರೆವ್ಯೂ ಮಾಡಿ ತಕ್ಷಣ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಮತ್ತು ವಸೂಲಿಯನ್ನು ತಡೆಹಿಡಿಯುವುದಕ್ಕೆ ಹೇಳಬೇಕು. ಅವರಿಗೆ ಹೆರಾಸ್‌ಮೆಂಟ್ ಆಗದಹಾಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಹೇಳಬೇಕು. ಎರಡನೆಯದಾಗಿ, ೩೯ ಕೋಟಿ ರೂಪಾಯಿ ವಸೂಲು ಮಾಡಿದ್ದೇವೆ ಎಂದು ಹೇಳಿದ್ದೀರಿ ಇದು ಒಳ್ಳೆಯದು. ರೆಕವರಿ ಮಾಡಲಿಲ್ಲ ಎಂದರೆ ಫೈನಾನ್ಷಿಯಲ್ ರಿಸೋರ್ಸಸ್ ಮೊಬಿಲೈಸ್ ಮಾಡುವುದಕ್ಕಾಗುವುದಿಲ್ಲ ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಯಾರು ಬಡಪರಿದ್ದಾರೋ ಅವರಿಂದ ಮಾತ್ರ ವಿಲೇಜ್ ಅಕೌಂಟೆಂಟ್ ಮತ್ತು ತಹಸೀಲ್ದಾರ್ ಅವರು ವಸೂಲಿ ಮಾಡುತ್ತಿದ್ದಾರೆ. ಶ್ರೀಮಂತರ ಕಡೆಯಿಂದ ಒತ್ತಾಯ ಮಾಡುತ್ತಿಲ್ಲ. ನೀವು ಒಂದು ಸ್ಟೇಟ್‌ಮೆಂಟ್ ಓದಿದಿರಿ ನಾನೂ ಅಲ್ಲಿದ್ದರೂ ಅದೇರೀತಿ ಓದುತ್ತಿದ್ದೆ. ಅದು ಬೇರೆ ವಿಚಾರ ನಾವು ನೋಡಿದ್ದೇವೆ. ಅಸಿಸ್ಟೆಂಟ್ ಕಮೀಷನರ್ ಆಗಲೀ ತಹಸೀಲ್ದಾರ್ ಆಗಲೀ ಯಾರ ಮನೆಗೆ ಹೋಗುತ್ತಾರೆ ? ಯಾವುದೇ ಹಳ್ಳಿಗೆ ವಿಸಿಟ್ ಮಾಡಿದರೂ ಕೂಡ ಶ್ರೀಮಂತರ ಮನೆ ಕಟ್ಟೆ ಮೇಲೇ ಹೋಗಿ ಕೂಡುವುದು. ಸ್ಕೂಲ್ ಬಿಲ್ಡಿಂಗ್ ಇಲ್ಲ, ಧರ್ಮಶಾಲೆ ಇಲ್ಲ ಎಂದು ಹೇಳಿದರೆ ಅದನ್ನು ನೋಡಲು ಹೋದರೆ ಸಾಹುಕಾರರ ಮನೆಯ ಕಟ್ಟೆಯ ಮೇಲೆ ಹೋಗಿ ಕೂಡುತ್ತಾರೆ ಅಧಿಕಾರಿಗಳು ಅಲ್ಲೇ ಅವರಿಗೆ ಎಲ್ಲಾ ವ್ಯವಸ್ಥೆ ಆಗುತ್ತದೆ. ಆದ್ದರಿಂದ ಅಧಿಕಾರಿಗಳು ಏನು ಮಾಡುತ್ತಾರೆಂದರೆ ಬಡವರಿಂದ ತೆಗೆದುಕೊಳ್ಳುತ್ತಾರೆ, ಶ್ರೀಮಂತರಿಗೆ ಬಿಡುತ್ತಾರೆ. ಶ್ರೀಮಂತರು ಆಮೇಲೆ ನಾನು ಬಂದುಭೇಟಿಯಾಗುತ್ತೇನೆ ಎಂದು ಹೇಳಿದರೆ ಅಧಿಕಾರಿಗಳು ಅವರನ್ನು ಬಿಡುತ್ತಾರೆ. ಟ್ರಾಕ್ಟರ್ ಲೋನ್ ಆಗಲೀ, ಪಿ.ಎಲ್.ಡಿ. ಬ್ಯಾಂಕ್ ಸಾಲ ಆಗಲೀ ಅಥವಾ ಬೇರೆ ಯಾವುದೇ ಸಾಲ ಆಗಲೀ ಅವರಿಗೆ ಹೆರಾಸ್‌ಮೆಂಟ್ ಇರುವುದಿಲ್ಲ. ಬಡವರಿಗೆ ಮಾತ್ರ ತೊಂದರೆ ಇರುತ್ತದೆ. ಹಣ ಕೊಡು, ಇಲ್ಲ ಅಂದರೆ ಹೊಲ ಹರಾಜು ಮಾಡುತ್ತೇನೆ ಎಂದು ಹೆದರಿಕೆ ಹಾಕುತ್ತಾರೆ ಆದ್ದರಿಂದ ತಾವು ಗುಲ್ಬರ್ಗ ಡೆಪ್ಯುಟಿ ಕಮಿಷನರ್ ಅವರನ್ನು ಕರೆಸಿ ಎಲ್ಲಿ ಇಂಥ ಕೇಸ್‌ಗಳಿವೆ ಅವುಗಳ ಬಗ್ಗೆ ಪುನರ್‌ಪರಿಶೀಲನೆ ಮಾಡಿ ನ್ಯಾಯ ದೊರಕಿಸಿ ಕೊಡುತ್ತೀರಾ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—೧೯೫೪ ರಿಂದ ವಸೂಲು ಮಾಡತಕ್ಕ ವಿಚಾರವನ್ನು ಅವರು ಹೇಳಿದ್ದಾರೆ ಎಲ್ಲೆಲ್ಲಿ ಅಂಥ ಅನ್ಯಾಯಗಳಾಗಿವೆ ಅವುಗಳ ಬಗ್ಗೆ ಕೂಡಲೇ ವಿಚಾರಣೆ ಮಾಡಿಸಿ ಡೆಪ್ಯುಟಿ ಕಮಿಷನರ್ ಅವರಿಂದ ಒಂದು ವರದಿಯನ್ನು ತರಿಸುತ್ತೇನೆ. ಎರಡನೆಯದು, ಸ್ಮಾಲ್ ಫಾರ್ಮರ್ಸ್ ಮತ್ತು ಮಾರ್ಜಿನಲ್ ಫಾರ್ಮರ್ಸ್‌ಗೆ ಎಲ್ಲೂ ಕೊಂದರೆ ಕೊಡಬೇಡಿ ಎಂದು ಕಡ್ಡಾಯವಾಗಿ ಹೇಳಿದ್ದೇವೆ. ಆ ತರಹ ಇನ್‌ಸ್ಟೆನ್ಸಸ್ ಇದ್ದರೆ ಹೇಳಿದರೆ...

ಶ್ರೀ ಎಂ.ಮಲ್ಲಿಕಾರ್ಜುನ ಖಾರ್ಗೆ.—ನಮ್ಮ ಕಡೆ ಇರುವುದು ಡ್ರೈ ಲ್ಯಾಂಡ್. ಈ ಕಡೆ ಮೂರು ನಾಲ್ಕು ಎಕರೆ ಇಟ್ಟುಕೊಂಡಿರುವವರು ಕಾರ್ ಇಟ್ಟುಕೊಂಡಿರುತ್ತಾರೆ. ನಮ್ಮ ಕಡೆ ೨೦ ಎಕರೆ ಇದ್ದರೂ ಏನೂ ಪ್ರಯೋಜನ ಇಲ್ಲ. ಜೋಳ ಏನಾದರೂ ಬಿತ್ತಿಕೊಂಡು ಜೀವನ ಮಾಡುತ್ತಾರೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಕಂದಾಯ ಯಾವಾಗ ಯಾವಾಗ ವಿನಾಯಿತಿ ಕೊಟ್ಟಿದ್ದೀವಿ ಆದು ಆಫೀಸ್ ರೆಕಾರ್ಡ್‌ನಲ್ಲಿರುತ್ತದೆ. ಆ ಬಗ್ಗೆ ಆಜ್ಞೆ ಇದೆ ಆದನ್ನು ಕಳುಹಿಸಿಕೊಡುತ್ತೇನೆ ೨೦ ವರ್ಷದಲ್ಲಿ ಎಷ್ಟು ವರ್ಷ ಕಂದಾಯ ಸೂಟ್ ಬಿಟ್ಟಿದ್ದೇವೆ ಆದನ್ನು ವಸೂಲು ಮಾಡುವುದಕ್ಕೆ ಬರುವುದಿಲ್ಲ. ವಸೂಲು ಮಾಡಕೂಡದು ಎಂದು ಹೇಳಿದ್ದೇವೆ. ದೌರ್ಜನ್ಯ ಏನಾದರೂ ಈ ವಿಚಾರದಲ್ಲಿ ಆಗಿದ್ದರೆ ವಿಚಾರಣೆ ಮಾಡುತ್ತೇನೆ. ೧೯೫೪ ರಿಂದ ವಸೂಲು ಮಾಡತಕ್ಕ ವಿಚಾರದಲ್ಲಿ ಗೊಂದಲ ಇದೆ. ಆದನ್ನು ನಾನು ಒಪ್ಪುತ್ತೇನೆ. ಡಿ.ಸಿ.ಜಿ.ನಲ್ಲಿ ಆಕೌಂಟ್ ಸರಿಯಾಗಿ ಮಾಡುವುದಿಲ್ಲ. ಕೆಲವು ರೈತರು ಹಣ ಕಟ್ಟಿದ್ದೇವೆ ಎಂದು ಹೇಳುತ್ತಾರೆ. ರಸೀತಿ ಕಳೆದುಹೋಗಿದೆ ಎಂದು ಹೇಳುತ್ತಾರೆ. ಇದೆಲ್ಲಾ ಆಗುತ್ತದೆ. ಇದರ ಬಗ್ಗೆ ಡೆಪ್ಯುಟಿ ಕಮಿಷನರ್‌ಗೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಹಳೇ ಪಟ್ಟಾವಾರ್ ಕೂಡ ವಸೂಲು ಮಾಡಿದರೂ ಲೆಕ್ಕಕ್ಕೆ ಜಮಾ ಮಾಡಿಕೊಳ್ಳುತ್ತಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಹೌದು. ವಸೂಲು ಮಾಡಿದರೂ ಜಮಾ ತೋರಿಸಿಲ್ಲ ೫೦೦ ರೂಪಾಯಿ ವಸೂಲು ಮಾಡಿದ್ದರೆ ೫೦ ರೂಪಾಯಿ ಎಂದು ರಸೀತಿ ಕೊಟ್ಟಿರುತ್ತಾರೆ. ಅಂಥ ಉದಾಹರಣೆಗಳಿವೆ. ಸ್ಪೆಸಿಫಿಕ್ಕಾಗಿ ನೀವು ಹೇಳಿದ ತಾಲ್ಲೂಕಿನಲ್ಲಿ ಡೀಟೈಲ್ ರಿಪೋರ್ಟ್ ತರಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಮುಂದಿನ ಗಮನ ಸೆಳೆಯುವ ಸೂಚನೆ...

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಸದಸ್ಯರು ಇಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಿನಿಟಿಂಗ್‌ಗೆ ಹೋಗಿದ್ದಾರೆ ಬೇಕಾದರೆ ಕರೆಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಉತ್ತರ ಕೊಡುವುದಕ್ಕೆ ರೆಡಿಯಾಗಿದ್ದೇನೆ. ಆದರೆ ಹೇಗಿದ್ದರೂ ಮಾನ್ಯ ಸದಸ್ಯರಿಲ್ಲ, ನಾಳೆ ತೆಗೆದುಕೊಳ್ಳಿ. ನಾಳೆ ಮಂತ್ರಿಗಳು ಬರದಿದ್ದರೆ ನಾನೇ ಉತ್ತರ ಕೊಡುತ್ತೇನೆ, ಕಾರಣ ಇಷ್ಟೆ ವಾಟರ್ ಬೋರ್ಡ್ ಛೇರ್ಮನ್ನರು ಕಾಲವಾಗಿದ್ದಾರೆ. ಅದಕ್ಕೋಸ್ಕರ ಹೇಳುತ್ತಿದ್ದೇನೆ.

ಅಧ್ಯಕ್ಷರು.—ಆಯಿತು. ಈಗ ನಿಯಮ ೩೩೪ರ ಮೇರೆಗೆ ಪ್ರಸ್ತಾಪಿಸುವ ವಿಷಯಗಳು.

ನಿಯಮ ೩೩೪ರ ಮೇರೆಗೆ

ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಮತ್ತು ಸುತಗಟ್ಟಿ ಗ್ರಾಮಗಳಲ್ಲಿ ಕಟ್ಟಿರುವ ಶಾಲಾ ಕಟ್ಟಡಗಳ ದುಸ್ಥಿತಿಯ ಬಗ್ಗೆ

ಶ್ರೀ ಶಿವಾನಂದ ಎಚ್. ಕೌಜಲಗಿ.—ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಹಿಟ್ಟಣಗಿ ಮತ್ತು ಸುತಗಟ್ಟಿ ಪುನರ್ ವಸತಿ ಗ್ರಾಮಗಳಲ್ಲಿ ಕಾರ್ಯ ನಿರ್ವಹಣ ಅಭಿಯಂತರರು ಮಲಪ್ರಭಾ ಎಡದಂಡೆ ಕಾಲುವೆ ನಿರ್ಮಾಣ ವಿಭಾಗ ನವಿಲುತೀರ್ಥದ ಸದಸ್ಯತ್ವ ತಾಲ್ಲೂಕಿನಲ್ಲಿ ಕೆಲವು ಶಾಲೆಗಳನ್ನು ಕಟ್ಟಿದ್ದು ಅವುಗಳ ಗುಣಮಟ್ಟ ಚೆನ್ನಾಗಿ ಇರದೆ ಇದ್ದುದರಿಂದ ಆ ಶಾಲೆಗಳು ಯಾವುದೇ ಸಂದರ್ಭದಲ್ಲಿ ಬೀಳುವ ಸ್ಥಿತಿಯಲ್ಲಿವೆ.

ಅಧ್ಯಕ್ಷರು ಕಾಡಾ ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ ಬೆಳಗಾಂವ ಇವರು ರಿಪೇರಿ ಮಾಡಲು ಅನುಮತಿ ನೀಡಿದ್ದರೂ ಇದುವರೆಗೆ ರಿಪೇರಿ ಮಾಡಿರುವುದಿಲ್ಲ ಆದಕಾರಣ ರಿಪೇರಿ ಮಾಡಲು ಮುಖ್ಯ ಇಂಜಿನೀಯರ್ ಇರಿಗೇಷನ್ ಉತ್ತರ ವಲಯ, ಬೆಳಗಾಂವ ಇವರಿಗೆ ಆದೇಶ ನೀಡಬೇಕು ಎಂದು ನಾನು ತಮ್ಮ ಮುಖಾಂತರ ನೀರಾವರಿ ಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೇ, ನಾನು ಉತ್ತರವನ್ನು ತರಿಸಿಕೊಡುತ್ತೇನೆ.